**ಸಾಕ್ಷಿಗೆ ದಿನಾಂಕಃ17-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀಮತಿ ಎಸ್ ಎಂ ವಕೀಲರಿಂದ ::**

ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಇರುವ ಅಂಶಗಳು ನನ್ನ ಪ್ರಕಾರ ಸರಿ ಇರುತ್ತದೆ. ಈ ದಾವೆಯಲ್ಲಿ ಹೂಡಿರುವ ತಕರಾರಿನಲ್ಲಿ ಇರುವ ಅಂಶಗಳು ಹಾಗೂ ನನ್ನ ಪರವಾಗಿ ಸಲ್ಲಿಸಿರುವ ದಾಖಲಾತಿಗಳು ನನ್ನ ಪ್ರಕಾರ ಸರಿ ಇರುತ್ತವೆ. ನನ್ನ ಪ್ರಕಾರ ನನ್ನ ಅಣ್ಣ ಈಶ್ವರಪ್ಪ ಹೂಡಿದ್ದ ಅಸಲು ದಾವಾ 66/2009 ದಾವೆಯಲ್ಲಿನ ಅಂಶಗಳು ಹಾಗೂ ದಾವಾ ಆಸ್ತಿಗಳು ಸರಿ ಇರುತ್ತವೆ. ಪ್ರಸ್ತುತ ದಾವೆಯಲ್ಲಿನ ದಾವಾ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿನ ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ನಮಗೆ ಬಂದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. 1991 ರಲ್ಲಿ ನಮ್ಮ ಕುಟುಂಬದಲ್ಲಿ ಆಗಿರುತ್ತದೆ ಎಂದು ಹೇಳುತ್ತಿರುವ ವಿಭಾಗಕ್ಕೆ ಸಂಬಂಧಪಟ್ಟಂತೆ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಭಾಗ ಪತ್ರದಲ್ಲಿ ನನ್ನ ಸಹೋದರಿಯರು ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅದನ್ನು ನಮ್ಮ ತಂದೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈಗ ಹೇಳುತ್ತಿರುವ ವಿಭಾಗ ಪತ್ರದಲ್ಲಿ ಯಾರು ಯಾರಿಗೆ ಎಷ್ಟು ಹೋಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆ ತಾಯಿಯ ಎಲ್ಲಾ ಗಂಡು ಮಕ್ಕಳಿಗೆ ತಲಾ 5-6 ಎಕರೆ ಆಸ್ತಿಗಳು ಹೋಗಿರುತ್ತವೆ ಎಂದು ನುಡಿದಿರುತ್ತಾರೆ. ಪ್ರಸ್ತುತದಲ್ಲಿ ನನ್ನ ಹೆಸರಿನಲ್ಲಿ ಸರ್ವೇ ನಂಬರ್ 82/3 ರಲ್ಲಿ 3 ಎಕರೆ, ಸರ್ವೇ ನಂಬರ್ 33/2 ರಲ್ಲಿ 2 ಎಕರೆ, ಸರ್ವೇ ನಂಬರ್ 33/2 ರಲ್ಲಿ 2 ಎಕರೆ 17 ಗುಂಟೆ, ಸರ್ವೇ ನಂಬರ್ 30 ರಲ್ಲಿ 5 ಗುಂಟೆ ಇರುತ್ತದೆ. ಅಸಲು ದಾವಾ 66/2009 ದಾವೆಯು ನನ್ನ ತಂದೆ ಮರಣ ಶಾಸನ ಪತ್ರಕ ಬರೆದಿದ್ದ ಕಾರಣ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿನ ದಾವಾ ಆಸ್ತಿಗಳು ಸಹ ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 5 ಸರ್ವೇ ನಂಬರ್ 33/2 1 ಎಕರೆ 38 ಗುಂಟೆ ಆಸ್ತಿಯು ನನ್ನ ತಂದೆ ನನ್ನ ಸಹೋದರಿಯರಿಗೆ ಬಿಟ್ಟು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೆಯೇ ನನ್ನ ಸಹೋದರಿಯರಿಗೂ ಸಹ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ಸಮಾನದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ 66/2009 ದಾವೆಯಲ್ಲಿ ಈ ದಾವೆಯಲ್ಲಿನ ವಾದಿಗಳು

ಹಾಜರಾಗಿರುತ್ತಾರೋ ಇಲ್ಲವೋ ಎಂದರೆ ಸಾಕ್ಷಿಯು ಅವರು ನ್ಯಾಯಾಲಯದಲ್ಲಿ ಹಾಜರಾಗಿರುತ್ತಾರೆ ಎಂದು ನನ್ನ ತಂದೆ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಹುಷಾರಿಲ್ಲದ ಕಾರಣ ಹಾಗೂ 3 ನೇ ಪ್ರತಿವಾದಿ ಸದರಿ ಸಮಯದಲ್ಲಿ ಪಿರಿಯಪಟ್ಟಣದಲ್ಲಿ ವಾಸ ಇದ್ದ ಕಾರಣ ವಾದಿಗಳಿಗೆ ಮೋಸ ಮಾಡುವ ದುರುದ್ದೇಶದಿಂದ ನಾನೇ ಹೆಚ್ಚುವರಿ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿಗಳ ಆದಾಯವನ್ನು ನಾನು ಒಬ್ಬನೇ ಉಪಯೋಗಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: